| |
|---|
| **Deposition Sheets (RP.No.57)** <br> **Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 454/2024**

ಪಿ.ಡಬ್ಲ್ಯು : 3 ಸಿ.ಡಬ್ಲ್ಯು : 3

ಸಾಕ್ಷಿದಾರನ ಹೆಸರು : ಸೈಯದ್ ಫರೀದ್
ತಂದೆಯ ಹೆಸರು : ಸೈಯದ್ ನಜೀರ್
ಪ್ರಾಯ : 37 ವರ್ಷ
ಉದ್ಯೋಗ : ಕ್ಯಾಬ್ ಚಾಲಕ
ವಾಸ : ಹಿರ್ಗಾನ

ದಿನಾಂಕ 05-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಆರೋಪಿತರ ಪರಿಚಯ ಇದೆ. ಅವರು ಚಾಸಾ-1 ರವರ ಸಂಬಂಧಿಕರು. ಚಾಸಾ-1, 2 ಪರಿಚಯ ಇದೆ. ಚಾಸಾ-1 ನನ್ನ ಚಿಕ್ಕಪ್ಪ. ಚಾಸಾ-2 ಚಿಕ್ಕಪ್ಪನ ಮಗ. ಚಾಸಾ-4 ರವರ ಪರಿಚಯ ಇಲ್ಲ.

ನಾನು ಘಟನೆಯನ್ನು ನೋಡಿರುವುದಿಲ್ಲ. ಘಟನೆಯಾದ ಮರುದಿನ ಸಂಜೆ ಆರೋಪಿತರು ಹಾಗೂ ಚಾಸಾ-1 ಮತ್ತು 2 ರವರ ನಡುವೆ ಗಲಾಟೆಯಾದ ಬಗ್ಗೆ ಚಾಸಾ-1 ರವರು ನನಗೆ ಹೇಳಿರುತ್ತಾರೆ. ಚಾಸಾ-2 ಮತ್ತು ಅವರ ಹೆಂಡತಿಯ ನಡುವೆ ರಾಜಿ ಮಾತುಕತೆ ನಡೆದ ಸಂದರ್ಭದಲ್ಲಿ ನಾನು ಜಮಾತ್ ಗೆ ಹೋಗಿರುವುದಿಲ್ಲ. ಚಾಸಾ-2 ರವರಿಗೆ ಆರೋಪಿತರು ಬೇವರ್ಸಿ, ಹಡಬೆ, ಬೋಳಿ ಮಗನೇ ಎಂದು ಬೈದು ಆತನನ್ನು ಅಡ್ಡ ಗಟ್ಟಿ ನಿಲ್ಲಿಸಿ, ಆತನ ಕೈಯಿಂದ ಮಗು ಕಸಿದುಕೊಂಡಿರುವುದನ್ನು ನಾನು ನೋಡಿರುವುದಿಲ್ಲ. ಆರೋಪಿತರು ಚಾಸಾ-1 ಮತ್ತು 2 ರವರಿಗೆ ಕಾಲಿನಿಂದ ತುಳಿದು,

ಕೈಯಿಂದ ಹಲ್ಲೆ ಮಾಡಿರುವುದನ್ನು ನೋಡಿರುವುದಿಲ್ಲ. ನಾನು ಯಾವುದೇ ಜಗಳ ಬಿಡಿಸಿರುವುದಿಲ್ಲ. ಸಾಕ್ಷಿಯ ನಿಪಿ-4 ಮತ್ತು 5 ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ. ನಾನು ಘಟನೆಯ ಕುರಿತು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರುः-</u>

ಈಗ ನನಗೆ ಓದಿ ಹೇಳಿದಂತೆ ನಾನು ದಿಃ 11-01-2024 ರಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿತರ ಪರ : ಶ್ರೀ ಎ.ಕೆ.ಹಚ್ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ